# ದೀಪಾವಳಿಯಲ್ಲಿ ಮಂತ್ರಿ ಸ್ಕ್ವೈರ್‌ನಲ್ಲಿ ವಿಶೇಷ ಮಕ್ಕಳಿಂದ ವೈವಿಧ್ಯ ಕಾರ್ಯಕ್ರಮ

ದೀಪಾವಳಿ ದೀಪಗಳ ಹಬ್ಬ. ಕತ್ತಲನ್ನು ಓಡಿಸಿ ಸರ್ವರಲ್ಲಿಯೂ ಸಕಾರಾತ್ಮಕ ಮನೋಭಾವ, ಸಂತಸವನ್ನು ತರುವ ಹಬ್ಬ. ಇಂಥದೊಂದು ನಂಬಿಕೆಯೊಂದಿಗೆ ಮಂತ್ರಿ ಸ್ಕ್ವೈರ್ ಈಗ ದೀಪಾವಳಿಯಲ್ಲಿ ಸಮರ್ಥನಂ ಟ್ರಸ್ಟ್‌ನ ಸುಮಾರು 25 ಉತ್ಸಾಹಿ ಅಂಗವಿಕಲ ಮಕ್ಕಳಿಂದ ಕಾರ್ಯಕ್ರಮ ಆಯೋಜಿಸುವ ಮೂಲಕ ಹಬ್ಬವನ್ನು ಆಚರಿಸುತ್ತಿದೆ. ಮಾಲ್‌ನ ಈ ಕಾರ್ಯಕ್ರಮದ ಉದ್ದೇಶವೆಂದರೆ ಈ ವಿಶೇಷ ಮಕ್ಕಳಿಗೆ ಪ್ರತಿಭಾಭಿವ್ಯಕ್ತಿಗೆ ವೇದಿಕೆ ಒದಗಿಸುವುದಷ್ಟೇ ಅಲ್ಲ; ಈ ದೀಪಾವಳಿಯ ಹಬ್ಬದ ಆಚರಣೆಯಲ್ಲಿ ಸ್ವತಃ ತಾವು ಭಾಗಿಯಾಗುವ ಅನುಭವವನ್ನು ಅವರಿಗೆ ನೀಡುವುದೇ ಆಗಿದೆ.



ಸಮರ್ಥನಂ ಟ್ರಸ್ಟ್ ಒಂದು ಲಾಭಯೇತರ ಸಂಸ್ಥೆಯಾಗಿದ್ದು, ವಿಶೇಷ ಅಂಗವಿಕಲ ಮಕ್ಕಳನ್ನು ಸಾಮಾಜಿಕ ಮತ್ತು ಆರ್ಥಿಕವಾಗಿ ಮುನ್ನಡೆಸಲು ಕಾರ್ಯನಿರ್ವಹಿಸುತ್ತಿದೆ. ಈ ವಿಶೇಷ ಮಕ್ಕಳು ಮಾಲ್‌ನ ಪ್ರೇಕ್ಷಕರಿಗಾಗಿ ವಿಶೇಷವಾಗಿ ಸಂಯೋಜಿಸಿದ ನೃತ್ಯದ ಜೊತೆಗೆ ಎರಡು ಗೀತೆಗಳನ್ನು ಪ್ರಸ್ತುತ ಪಡಿಸಲಿದ್ದಾರೆ.

ಈ ಸಂದರ್ಭದಲ್ಲಿ ಮಂತ್ರಿ ಸ್ಕ್ವೇರ್‌ನ ಮಾಲ್‌ನ ಮುಖ್ಯಸ್ಥ ನಿತಿನ್ ಬಿರ್ ಅವರು, ‘ಈ ದೀಪಾವಳಿ ಹಬ್ಬ ಪ್ರೀತಿ ಮತ್ತು ಸಂಭ್ರಮವನ್ನು ಒದಗಿಸಲಿದೆ. ಈ ವರ್ಷದ ದೀಪಾವಳಿಯ ಹಬ್ಬದ ಸಂಭ್ರಮವನ್ನು ಅಲಂಕರಣದ ಜೊತೆಗೆ ಮಾಲ್‌ನಲ್ಲಿ ಕಾರ್ಯಕ್ರಮ ನೀಡಲು ವಿಶೇಷ ಮಕ್ಕಳನ್ನು ಆಹ್ವಾನಿಸಲಾಗುತ್ತಿದೆ’ ಎಂದರು.

ಅಂಗವಿಕಲರಿಗಾಗಿ ಇರುವ ಸಮರ್ಥನಂ ಟ್ರಸ್ಟ್ ಕಾರ್ಯಕ್ರಮ ನೀಡಲಿದ್ದು, ಈ ಮೂಲಕ ವಿಶೇಷ ಮಕ್ಕಳಿಗೆ ಕಾರ್ಯಕ್ರಮ ನೀಡಲು ವೇದಿಕೆ ಒದಗಿಸುವುದರ ಜೊತೆಗೆ, ಅವರು ಪ್ರತಿಭೆಯಲ್ಲಿಯೂ ವಿಶೇಷ ಮಕ್ಕಳು ಎಂದು ಸಮಾಜಕ್ಕೆ ತೋರಿಸುವುದೇ ಆಗಿದೆ. ಎನ್‌ಜಿಓ ಜೊತೆಗೆ ಈ ನಿಟ್ಟಿನಲ್ಲಿ ಕೈಜೋಡಿಸುವುದು ಸಂತಸ ನೀಡಿದ್ದು, ಭವಿಷ್ಯದಲ್ಲಿಯೂ ಇಂಥ ಕಾರ್ಯಕ್ರಮ ಆಯೋಜಿಸಲು ಉತ್ಸುಕರಾಗಿದ್ದೇವೆ ಎಂದರು.